# 'ಚಾಣಕ್ಯ' ಬದಿಗೊತ್ತಿ, ರೊಮ್ಯಾಂಟಿಕ್ ಥ್ರಿಲ್ಲರ್ ಕಣ್ಣಿಗೊತ್ತಿ...

■ ಎನ್ವಿ



'ಚಾಣಕ್ಯ' ಹಿಂದಿ ಸಿನಿಮಾ ಮಾಡುವುದಾಗಿ ನೀರಜ್ ಪಾಂಡೆ ಕಳೆದ ವರ್ಷ ಸ್ಪಷ್ಟಪಡಿಸಿದ್ದರು. ಆದರೆ, ಕಾರಣಾಂತರಗಳಿಂದ ಅದು ಸದ್ಯಕ್ಕೆ ಮುಂದಕ್ಕೆ ಹೋಗಿದ್ದು, ಇನ್ನೊಂದು ರೊಮ್ಯಾಂಟಿಕ್ ಥ್ರಿಲ್ಲರ್ ಸಿನಿಮಾವನ್ನು ಅಜಯ್ ದೇವಗನ್ ಅವರೊಟ್ಟಿಗೆ ತಯಾರಿಸಲು ನೀರಜ್ ಮುಂದಾಗಿದ್ದಾರೆ.

1990ರ ದಶಕದ ಪ್ರೇಮಕಥನ ಹಾಗೂ ಈ ಕಾಲದ ಪ್ರೇಮಕಥನ – ಎರಡನ್ನೂ ಬೆಸೆದಂತಹ ಚಿತ್ರಕಥೆಯನ್ನು ಅವರು ಹೊಸೆದಿದ್ದಾರೆ. 1990ರ ದಶಕದ ಬ್ಯಾಕ್‌ಡ್ರಾಪ್‌ನಲ್ಲಿ ನಡೆಯುವ ಚಿತ್ರಕಥೆಯ ನಾಯಕನಾಗಿ ಅಜಯ್ ಇರಲಿದ್ದಾರೆ. ತಬು ಅವರಿಗೆ ಜೋಡಿ. ಸಾಯಿ ಮಂಜ್ರೇಕರ್ ಈ ಕಾಲದ ಪ್ರೇಮಿಯಾಗಿ ಗ್ಲಾಮರ್ ಕೊರತೆಯನ್ನು ನೀಗಲಿದ್ದಾರೆ.

ಪ್ರೇಮಕಥೆಯಾದರೂ ಥ್ರಿಲ್ಲರ್‌ನಲ್ಲಿ ಇರಬೇಕಾದ ಅಂಶಗಳೆಲ್ಲವೂ ಚಿತ್ರದಲ್ಲಿ ಇರಲಿವೆ ಎಂದು ನೀರಜ್ ಹೇಳಿದ್ದಾರೆ. ಲಖನೌದಲ್ಲಿ ಈಗಾಗಲೇ ಚಿತ್ರೀಕರಣ ಪ್ರಾರಂಭವಾಗಿದ್ದು, ಕೇವಲ 25 ದಿನಗಳಲ್ಲಿ ಅಜಯ್ ದೇವಗನ್ ಅಭಿನಯದ ಭಾಗಗಳನ್ನೆಲ್ಲ ಚಿತ್ರೀಕರಣ ಮಾಡಿಕೊಳ್ಳುವ ಉದ್ದೇಶ ನಿರ್ದೇಶಕರದ್ದು.

ತಮಿಳಿನ 'ಖೈದಿ' ಸಿನಿಮಾದ ರೀಮೇಕ್ 'ಭೋಲಾ'ವನ್ನು ಖುದ್ದು ಅಜಯ್ ನಿರ್ದೇಶಿಸಿದ್ದು, ಅದು ಮಾರ್ಚ್‌ನಲ್ಲಿ ತೆರೆಕಾಣುವ ನಿರೀಕ್ಷೆ ಇದೆ. ಆ ಸಿನಿಮಾಗೂ 'ಕೆಜಿಎಫ್' ಸಿನಿಮಾದಿಂದ ಸದ್ದು ಮಾಡಿದ್ದ ರವಿ ಬಸ್ರೂರ್ ಸಂಗೀತ ನಿರ್ದೇಶನ ಮಾಡಿದ್ದಾರೆ. ದಕ್ಷಿಣ ಭಾರತದ ಸಿನಿಮಾಗಳು ಹಿಂದಿಯವರನ್ನು ಯಾವ ಪರಿಯಲ್ಲಿ ಕಾಡುತ್ತಿವೆ ಎನ್ನುವುದಕ್ಕೆ ಇವೆಲ್ಲ ಸಾಕ್ಷಿಗಳು. ಲೋಕೇಶ್ ಕನಕರಾಜ್ ತಮಿಳಿನ 'ಖೈದಿ' ಚಿತ್ರವನ್ನು ನಿರ್ದೇಶಿಸಿದ್ದರು. ■



# ಸಲ್ಮಾನ್ ಸಮೀಕರಣ

'ಕಿಸಿ ಕಾ ಭಾಯಿ ಕಿಸಿ ಕೀ ಜಾನ್' ಎಂಬ ಮಸಾಲಾ ಸಿನಿಮಾದ ಮೊದಲ ಟೀಸರ್ ಮೊನ್ನೆಯಷ್ಟೇ ಬಿಡುಗಡೆಯಾಯಿತು. ಸಲ್ಮಾನ್ ಖಾನ್ ಖಳರನ್ನು ಮೆಟ್ರೊ ರೈಲಿನಲ್ಲಿ ಒದ್ದರೆ ಕಿಟಕಿಯ ಗಾಜು ಒಡೆದುಕೊಂಡು ಇನ್ನೊಂದು ರೈಲಿನ ಕಿಟಕಿಯ ಗಾಜು ಒಡೆದುಕೊಂಡು ತೂರಿಬೀಳುವ ದೃಶ್ಯ ನೋಡಿ ಕೆಲವರು ರೋಮಾಂಚಿತರಾಗಿದ್ದರೂ ಆಗಿರಬಹುದು.

ಈ ಸಿನಿಮಾ ಕೂಡ ಉತ್ತರ ಹಾಗೂ ದಕ್ಷಿಣದ ಧ್ರುವೀಕರಣ. ಸಲ್ಮಾನ್ ಖಾನ್ ಸಿನಿಮಾದ ನಾಯಕ. ಪೂಜಾ ಹೆಗಡೆ ನಾಯಕಿ. ತೆಲುಗು ನಟ ವೆಂಕಟೇಶ್ ಕೂಡ ಮುಖ್ಯ ಪಾತ್ರಧಾರಿ. ಅವರಲ್ಲದೆ, ತೆಲುಗಿನ ಜಗಪತಿ ಬಾಬು, ಒಂದು ಕಾಲದಲ್ಲಿ ತೆಲುಗು ಸಿನಿಮಾಗಳಲ್ಲೂ ಸದ್ದು ಮಾಡಿದ್ದ ಭೂಮಿಕಾ ಚಾವ್ಲಾ ಕೂಡ ಅಭಿನಯಿಸಿದ್ದಾರೆ. ಹಿಮೇಶ್ ರೇಷಮಿಯಾ, ಸುಖಬೀರ್ ಸಿಂಗ್, ಸಾಜಿದ್ ಖಾನ್, ಅಮಾಲ್ ಮಲ್ಲಿಕ್ ಅಲ್ಲದೆ ದೇವಿಶ್ರೀ ಪ್ರಸಾದ್ ಹಾಗೂ ಕನ್ನಡದ ರವಿ ಬಸ್ರೂರ್ ಅವರಿಂದಲೂ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿಸಲಾಗಿದೆ. 'ಅನ್ನಿಯನ್' ತರಹದ ಸಿನಿಮಾದ ಸಿನಿಮಾಟೊಗ್ರಫರ್ ಆಗಿದ್ದ ತಮಿಳುನಾಡಿನ ವಿ. ಮಣಿಕಂಠನ್ ಈ ಸಿನಿಮಾದ ದೃಶ್ಯಗಳನ್ನೂ ಸೆರೆಹಿಡಿಯಲಿದ್ದಾರೆ.

ಫರ್ಹಾದ್ ಸಮ್ಜಿ ನಿರ್ದೇಶನದ ಈ ಚಿತ್ರದಲ್ಲಿ ಸಲ್ಮಾನ್ ಖಾನ್ ತಮ್ಮ ಎಂದಿನ ಸಂಪೂರ್ಣ ಮನರಂಜನೆಯ ಶೈಲಿಗೆ ಹೊರಳಿದ್ದಾರೆ ಎನ್ನುವ ಮಾತಿದೆ. 'ಭಾರತ್', 'ದಬಂಗ್ 3', 'ರಾಧೆ' ಹಿಂದಿ ಸಿನಿಮಾಗಳು ಮಕಾಡೆಯಾಗಿರುವುದರಿಂದ ಅವರಿಗೆ ಒಂದು ಹಿಟ್ ಅಗತ್ಯವಿದೆ. 'ಪಠಾಣ್' ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ಅವರು ಅಭಿನಯಿಸಿದ್ದು, ಆ ಸಿನಿಮಾ ಮೊದಲ ಕೆಲವು ದಿನಗಳಲ್ಲೇ ಉತ್ತಮ ವಹಿವಾಟು ನಡೆಸಿರುವುದು ಚೇತೋಹಾರಿ ವಿಷಯವಾಗಿದೆ.

ದಕ್ಷಿಣ ಭಾರತದ ಪ್ರೇಕ್ಷಕರನ್ನೂ ಹಿಡಿದಿಡಲು ಅಲ್ಲಿನ ನಟ–ನಟಿಯರು ಹಾಗೂ ತಂತ್ರಜ್ಞರನ್ನು ನೆಚ್ಚಿಕೊಳ್ಳುವ ವರಸೆ ಹೊಸತೇನಲ್ಲ. ಇದೇ ಸಲ್ಮಾನ್ ಈ ಹಿಂದೆ ಪ್ರಭುದೇವ ಅವರನ್ನು ಕರೆಸಿ, ರೀಮೇಕ್ ಸಿನಿಮಾ ನಿರ್ದೇಶಿಸಿದ್ದವರು.

ಈದ್ ಹೊತ್ತಿಗೆ 'ಕಿಸಿ ಕಾ ಭಾಯಿ ಕಿಸಿ ಕೀ ಜಾನ್' ತೆರೆಕಾಣಲಿದೆ. ■